ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

NO. 1, Unnatha Shikshana Soudha, Sheshadri Road, Bangalore - 560 001 Phone: 080 22343904, email: bngcce@kar.nic.in

ಸಂಖ್ಯೆ: ಕಾಶಿಇ/ಮಾತಂವಿ/ಪಿಯುಆರ್/13/ಇನ್ಫೋ/2020 ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಕಛೇರಿ,

Computer No.369295 ದಿನಾಂಕ: 21/06/2021

# ಸುತ್ತೋಲೆ-4

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್ ಪಿ.ಸಿಗಳನ್ನು ಹಂಚಿಕೆ ಮಾಡುವ ಬಗ್ಗೆ

ಉಲ್ಲೇಖ:

1. ಸರ್ಕಾರದ ಆದೇಶ ಸಂಖ್ಯೆ:ಇಡಿ 171 ಹೆಚ್‌ಪಿಸಿ 2020 ದಿನಾಂಕ: 11/12/2020 ಮತ್ತು 02/3/2021
2. ಈ ಕಛೇರಿಯ ದಿನಾಂಕ:23/03/2021, 08/04/2021 ಮತ್ತು 15/04/2021ರ ಸಮಸಂಖ್ಯೆಯ ಸುತ್ತೋಲೆಗಳು

>>><<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಥಮ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್ ಪಿ.ಸಿಗಳನ್ನು ಒದಗಿಸುವ ಯೋಜನೆಯಡಿಯಲ್ಲಿ ಕಾಲೇಜುಗಳಿಂದ ಅರ್ಹ ವಿದ್ಯಾರ್ಥಿಗಳ ಸಂಖ್ಯೆಯ ಆಧಾರದಲ್ಲಿ ಟ್ಯಾಬ್ಲೆಟ್ ಪಿ.ಸಿ.ಗಳನ್ನು 514 ಕಾಲೇಜುಗಳಿಗೆ ಈಗಾಗಲೇ ಸರಬರಾಜು ಮಾಡಲಾಗಿದ್ದು, ಉಳಿಕೆ ಕಾಲೇಜುಗಳಿಗೆ ಕೂಡಾ ಸಧ್ಯದಲ್ಲಿಯೇ ಸರಬರಾಜು ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು. ದಿನಾಂಕ: 23/06/2021ರಂದು ಬೆಳಿಗ್ಗೆ 11:30ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ಟ್ಯಾಬ್ಲೆಟ್ ಪಿ.ಸಿ.ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಪ್ರಕ್ರಿಯೆಗೆ ಚಾಲನೆ ನೀಡಲಿದ್ದಾರೆ. ಈ ಹಿನ್ನಲೆಯಲ್ಲಿ ದಿನಾಂಕ:23/06/2021ರಂದು ರಾಜ್ಯಾದ್ಯಂತ ಇಲಾಖಾ ವ್ಯಾಪ್ತಿಯ ಎಲ್ಲಾ ಕಾಲೇಜುಗಳಲ್ಲಿ ಕೂಡಾ ಈ ಪ್ರಕ್ರಿಯೆಯನ್ನು ಸಾಂಕೇತಿಕವಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು ಈ ಸಂಬಂಧದಲ್ಲಿ ಪ್ರಾಂಶುಪಾಲರುಗಳಿಗೆ ಈ ಕೆಳಗಿನ ಸೂಚನೆಗಳನ್ನು ನೀಡಲಾಗಿದೆ:

1. ಸನ್ಮಾನ್ಯ ಮುಖ್ಯಮಂತ್ರಿಗಳು ಟ್ಯಾಬ್ಲೆಟ್ ಪಿ.ಸಿ. ವಿತರಣೆ ಪ್ರಕ್ರಿಯೆಗೆ ಚಾಲನೆ ನೀಡಿದ ನಂತರ, ಅದೇ ದಿವಸ, ಅದೇ ಸಮಯಕ್ಕೆ ಎಂದರೆ, ದಿನಾಂಕ:23/06/2021ರಂದು ಬೆಳಿಗ್ಗೆ 11.30 ಗಂಟೆಗೆ ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಮಾನ್ಯ ಸ್ಥಳೀಯ ಶಾಸಕರ ಉಪಸ್ಥಿತಿಯಲ್ಲಿ ಮತ್ತು ಲೀಡ್ ಕಾಲೇಜುಗಳಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಲೋಕಸಭೆ ಸದಸ್ಯರು ಮತ್ತು ಮಾನ್ಯ ಸ್ಥಳೀಯ ಶಾಸಕರು ಉಪಸ್ಥಿತಿಯಲ್ಲಿ ಆಯಾ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ 10 ಅರ್ಹ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಟ್ಯಾಬ್ಲೆಟ್ ಪಿ.ಸಿ. ವಿತರಣೆ ಮಾಡಲು ಶಿಷ್ಟಾಚಾರಕ್ಕೆ ಅನುಗುಣವಾಗಿ ಮತ್ತು ಕೋವಿಡ್ ನಿಯಮಗಳನ್ನು ಪಾಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

2. ಉದ್ಘಾಟನೆಯ ನಂತರ ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಳಿದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೂ ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಿ ಟ್ಯಾಬ್ಲೆಟ್ ಪಿ.ಸಿ. ಗಳನ್ನು ವಿತರಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಒಂದೇ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಗುಂಪು ಸೇರದಂತೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
3. ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿ.ಸಿ.ಗಳನ್ನು ವಿತರಿಸುವ ಸಂದರ್ಭದಲ್ಲಿ ಅವರಿಂದ ಪಡೆಯಬೇಕಾಗಿರುವ ಪ್ರಮಾಣಪತ್ರದ ನಮೂನೆ ಹಾಗೂ ರಸೀದಿಗಳ ನಮೂನೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದ್ದು, ಅವುಗಳನ್ನು ಪಡೆದು ಕಾಲೇಜಿನಲ್ಲಿ ಸಂರಕ್ಷಿಸಿಟ್ಟುಕೊಳ್ಳತಕ್ಕದ್ದು. ಹಾಗೂ ಒಂದು ರಿಜಿಸ್ಟರ್‌ನಲ್ಲಿ ವಿದ್ಯಾರ್ಥಿಗಳ ಹೆಸರು, ವಿಶ್ವವಿದ್ಯಾಲಯ ನೋಂದಣಿ ಸಂಖ್ಯೆ ಮತ್ತು ಅವರಿಗೆ ನೀಡಲಾಗಿರುವ ಟ್ಯಾಬ್ಲೆಟ್ ಪಿ.ಸಿಯ ಕ್ರಮಸಂಖ್ಯೆಗಳನ್ನು ನಮೂದಿಸಿ, ಅವರಿಂದ ಸಹಿ ಪಡೆಯತಕ್ಕದ್ದು.
4. ಟ್ಯಾಬ್ಲೆಟ್‌ಗಳನ್ನು ಪಡೆದಿರುವ ವಿದ್ಯಾರ್ಥಿಗಳ ಹಾಗೂ ಟ್ಯಾಬ್ಲೆಟ್ ಪಿ.ಸಿ.ಗಳ ಕ್ರಮಾಂಕಗಳ ವಿವರಗಳನ್ನು ನಮೂದಿಸಲು ಇನ್ನೆರಡು ದಿನಗಳಲ್ಲಿ ಲಿಂಕ್ ಅನ್ನು ನೀಡಲಾಗುವುದು. ಎಲ್ಲಾ ಕಾಲೇಜುಗಳು ಕೂಡಾ ವಿವರಗಳನ್ನು ಅಡ್ಮಿಶನ್ ಪೋರ್ಟಲ್‌ನ ಟ್ಯಾಬ್ಲೆಟ್ ಪಿಸಿ ನಮೂನೆಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

ಲಗತ್ತು: ಪ್ರಮಾಣ ಪತ್ರ ಹಾಗೂ ರಸೀದಿಯ ನಮೂನೆಗಳು

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರು

**ಇವರಿಗೆ,**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು,**

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
2. ಕಾಲೇಜು ಶಿಕ್ಷಣ ಆಯುಕ್ತರ/ನಿರ್ದೇಶಕರ/ಮುಖ್ಯ ಆಡಳಿತಾಧಿಕಾರಿಗಳ/ಹೆಚ್ಚುವರಿ ನಿರ್ದೇಶಕರ ಆಪ್ತ ಶಾಖೆಗೆ- ಮಾಹಿತಿಗಾಗಿ
3. ಕಛೇರಿ ಪ್ರತಿ.

# ಪ್ರಮಾಣಪತ್ರ

_________________________ (ತಂದೆಯ ಹೆಸರು) ಇವರ ಮಗ/ಮಗಳಾದ _________________________ (ವಿದ್ಯಾರ್ಥಿಯ ಹೆಸರು) ನಾನು -------------------(ಕಾಲೇಜಿನ ಹೆಸರು) ಕಾಲೇಜಿನಲ್ಲಿ _______________ಕೋರ್ಸಿನಲ್ಲಿ_______ ತರಗತಿಯಲ್ಲಿ ಓದುತ್ತಿದ್ದು, ಕರ್ನಾಟಕ ಸರ್ಕಾರದಿಂದ 2020-21ನೇ ಸಾಲಿನಲ್ಲಿ ಪ್ರಥಮ ಪದವಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯಾಬ್ಲೆಟ್ ಪಿ.ಸಿಯನ್ನು ನೀಡುವ ಯೋಜನೆಯಡಿಯಲ್ಲಿ, ದಿನಾಂಕ_____________ರಂದು ನೀಡಲಾಗಿರುವ ಟ್ಯಾಬ್ಲೆಟ್ ಪಿ.ಸಿಯನ್ನು ಪಡೆಯುವ ಸಂದರ್ಭದಲ್ಲಿ ಈ ಕೆಳಗಿನಂತೆ ಪ್ರಮಾಣ ಮಾಡುತ್ತೇನೆ:

1. ಸರ್ಕಾರದ ಆದೇಶ ಸಂಖ್ಯೆ: ಇಡಿ/೧೭೦/ಹೆಚ್‌ಪಿಸಿ/೨೦೨೦ ಬೆಂಗಳೂರು ದಿನಾಂಕ:೦೨/೦೩/೨೦೨೧ರಲ್ಲಿ ವಿಧಿಸಲಾಗಿರುವ ಷರತ್ತುಗಳ ಕ್ರ.ಸಂ. ೫ ರಲ್ಲಿ “ಫಲಾನುಭವಿ ವಿದ್ಯಾರ್ಥಿಗಳು ಇತರೆ ಯೋಜನೆಗಳಲ್ಲಿ ಲ್ಯಾಪ್‌ಟಾಪ್/ಟ್ಯಾಬ್ಲೆಟ್ ಪಿ.ಸಿಗಳನ್ನು ಪಡೆದುಕೊಂಡಿದ್ದಲ್ಲಿ ಅಂತಹವರುಗಳನ್ನು ಕೈಬಿಡುವುದು” ಎಂದು ತಿಳಿಸಿರುವ ಅಂಶವನ್ನು ಕಾಲೇಜಿನ ಪ್ರಾಂಶುಪಾಲರು ನನ್ನ ಗಮನಕ್ಕೆ ತಂದಿದ್ದು, ನಾನು ಸರ್ಕಾರದ ಇತರೆ ಯಾವುದೇ ಯೋಜನೆಗಳಲ್ಲಿ ಲ್ಯಾಪ್‌ಟಾಪ್/ಟ್ಯಾಬ್ಲೆಟ್ ಪಿ.ಸಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ಧೃಢೀಕರಿಸುತ್ತೇನೆ.
2. ನಾನು ಪಡೆಯುತ್ತಿರುವ ಟ್ಯಾಬ್ಲೆಟ್ ಪಿ.ಸಿಯನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತೇನೆ, ಪ್ರಾಂಶುಪಾಲರು/ಉಪನ್ಯಾಸಕರುಗಳ ಸೂಚನೆಯನುಸಾರ ಅಗತ್ಯವಾದ ತರಗತಿಗಳಿಗೆ ಟ್ಯಾಬ್ಲೆಟ್ ಪಿ.ಸಿಯನ್ನು ತರುತ್ತೇನೆ ಮತ್ತು ಕಾಲೇಜಿನ ಪ್ರಾಂಶುಪಾಲರು/ಉಪನ್ಯಾಸಕರುಗಳು ಕೇಳಿದಾಗ ಟ್ಯಾಬ್ಲೆಟ್ ಪಿ.ಸಿಯನ್ನು ಅವರಿಗೆ ತೋರಿಸುತ್ತೇನೆ.
3. ನನಗೆ ನೀಡಿರುವ ಟ್ಯಾಬ್ಲೆಟ್ ಪಿ.ಸಿಯನ್ನು ನಾನು ಇತರ ಯಾವುದೇ ಅನ್ಯವ್ಯಕ್ತಿಗಳಿಗೆ ಸಾಲ ರೂಪದಲ್ಲಿ ತಾತ್ಕಾಲಿಕವಾಗಿ ನೀಡುವುದಾಗಲೀ ಅಥವಾ ಆರ್ಥಿಕ ಲಾಭಕ್ಕೆ/ಇತರ ಉದ್ದೇಶಗಳಿಗೆ ಒತ್ತೆ ಇಡುವುದಾಗಲೀ ಅಥವಾ ಮಾರಾಟವಾಗಲೀ ಮಾಡುವುದಿಲ್ಲ. ಈ ಷರತನ್ನು ಉಲ್ಲಂಘಿಸಿದಲ್ಲಿ ಕಾನೂನಿನ್ವಯ ವಿಧಿಸಲಾಗುವ ಶಿಕ್ಷೆಗೆ ಒಳಗಾಗುವ ಷರತ್ತಿಗೆ ಬದ್ಧನಾಗಿರುತ್ತೇನೆ ಹಾಗೂ ಅಂತಹ ಸಂದರ್ಭದಲ್ಲಿ ಟ್ಯಾಬ್ಲೆಟ್ ಪಿ.ಸಿಯ ನಿಗದಿತ ದರದಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಲು ಬದ್ಧನಾಗಿರುತ್ತೇನೆ.
4. Information Technology Act, 2000 ಮತ್ತುInformation Technology (Amendment) Act, 2008 ಪ್ರಕಾರ ಈ ಕೆಳಗಿನ ಸೈಬರ್ ಕ್ರೈಂ ವರ್ತನೆಗಳು ಶಿಕ್ಷಾರ್ಹ ಅಪರಾಧಗಳಾಗಿವೆಯೆಂದು ನನಗೆ ಅರಿವಿದ್ದು, ನಾನು ಅಂತಹ ವರ್ತನೆಗಳನ್ನು /ಕೆಲಸಗಳನ್ನು ಮಾಡುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಅ) ಸುಳ್ಳೆಂದು ತಿಳಿದಿರುವ ತಪ್ಪುಮಾಹಿತಿಗಳನ್ನಾಗಲೀ, ಇತರರಿಗೆ ಭಯ, ತೊಂದರೆ ಉಂಟುಮಾಡುವ ಮಾಹಿತಿಗಳನ್ನಾಗಲೀ, ವ್ಯಕ್ತಿ/ಜಾತಿ/ಜನಾಂಗಗಳ ಕುರಿತು ದ್ವೇಷಪೂರಿತ

ಮಾಹಿತಿಗಳನ್ನಾಗಲೀ, ಸಮಾಜದಲ್ಲಿ ಕಲಹ ಉಂಟು ಮಾಡುವ ಮಾಹಿತಿಗಳನ್ನಾಗಲೀ ಇ-ಮೇಲ್ ಸಂದೇಶಗಳ ಮೂಲಕ ಅಥವಾ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ/ಜಾಲತಾಣಗಳಲ್ಲಿ/ ಇಲೆಕ್ಟ್ರಾನಿಕ್ಕ್ ಫ್ಲಾಟ್‌ಫಾರ್ಮ್‌ಗಳಲ್ಲಿ ಅಪ್‌ಲೋಡ್ ಮಾಡುವುದರ ಮೂಲಕ ಸಂದೇಶ ಹರಡುವುದು, ಹರಡಲು ಸಹಾಯ ಮಾಡುವುದು ಅಥವಾ ಹರಡುವಂತೆ ಬೇರೆಯವರನ್ನು ಒತ್ತಾಯ ಮಾಡುವುದು.

ಆ) ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ಇತರರನ್ನು ಮೋಸಮಾಡುವುದು, ಬೇರೆ ವ್ಯಕ್ತಿಗಳನ್ನು ಅನುಕರಿಸುವುದು, ಇತರರ ಪಾಸವರ್ಡ/ಇಲೆಕ್ಟ್ರಾನಿಕ್ ಸಿಗ್ನೇಚರ್‌ಗಳನ್ನು ದುರುಪಯೋಗಗೊಳಿಸಿಕೊಳ್ಳುವುದು

ಇ) ಇತರ ವ್ಯಕ್ತಿಗಳ ಅರಿವಿಲ್ಲದೇ ಅವರ ಒಪ್ಪಿಗೆಯಿಲ್ಲದೇ ವೈಯಕ್ತಿಕ ಸ್ವಾತಂತ್ರವನ್ನು ಉಲ್ಲಂಘಿಸಿ ಅವರ ಅಸಭ್ಯ ಹಾಗೂ ವೈಯಕ್ತಿಕ ಭಾಗಗಳ ಭಾವಚಿತ್ರಗಳನ್ನು ತೆಗೆಯುವುದು, ಮಾಹಿತಿ ತಂತ್ರಜ್ಞಾನವನ್ನು ಬಳಸಿ ಪ್ರಕಟಿಸುವುದು ಮತ್ತು ಅದನ್ನು ಹರಡುವುದು

ಈ) ನೀಡಲಾಗಿರುವ ಅಧಿಕಾರವನ್ನು ಮೀರಿ, ಮಾಹಿತಿ ತಂತ್ರಜ್ಞಾನವನ್ನು ಬಳಸಿ ನಿರ್ಭಂಧಿತ ಮಾಹಿತಿಗಳನ್ನು ಪಡೆಯುವುದು ತನ್ಮೂಲಕ ಭಾರತದ ಐಕ್ಯತೆ, ಸಾರ್ವಭೌಮತ್ವ, ಭದ್ರತೆ, ಸ್ವಾತಂತ್ರಕ್ಕೆ ಧಕ್ಕೆ ತರುವಂತಹ ಕೆಲಸಗಳನ್ನು ಮಾಡುವುದೇ ಮುಂತಾದ ಸೈಬರ್ ಟೆರರಿಸಂ ಕೃತ್ಯಗಳನ್ನು ಎಸಗುವುದು

ಉ) ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ, ಸಾಮಾಜಿಕ/ನೈತಿಕ ಹೊಣೆಗಾರಿಕೆಯಿಲ್ಲದೇ ಅಸಭ್ಯವಾದ ಚಿತ್ರಗಳನ್ನು, ಪೋರ್ನೋಗ್ರಾಫಿಕ್ ಅಂಶಗಳನ್ನು ಒಳಗೊಂಡ ಚಿತ್ರಗಳನ್ನು/ ಮಾಹಿತಿಗಳನ್ನು ಇ-ಮೇಲ್ ಸಂದೇಶಗಳ ಮೂಲಕ ಅಥವಾ ಇಲೆಕ್ಟ್ರಾನಿಕ್ ಮಾಧ್ಮಗಳಲ್ಲಿ/ಸಾಮಾಜಿಕ ಅಥವಾ ಇತರ ಜಾಲತಾಣಗಳಲ್ಲಿ/ ಇಲೆಕ್ಟ್ರಾನಿಕ್ ಫ್ಲಾಟ್‌ಫಾರ್ಮ್‌ಗಳಲ್ಲಿ ಅಪ್‌ಲೋಡ್ ಮಾಡುವ ಮೂಲಕ ಸಂದೇಶ ಹರಡುವುದು, ಹರಡಲು ಸಹಾಯ ಮಾಡುವುದು ಅಥವಾ ಹರಡುವಂತೆ ಬೇರೆಯವರನ್ನು ಒತ್ತಾಯ ಮಾಡುವುದು.

ಊ) ಈ ಮೇಲಿನವುಗಳಲ್ಲದೇ Information Technology Act, 2000 ಮತ್ತು Information Technology (Amendment) Act, 2008 ಗಳಲ್ಲಿ ನಿಷೇಧಿಸಲಾಗಿರುವ ಇತರ ವಿಷಯಗಳು.

ಮೇಲಿನ ಯಾವುದೇ ಕಾರ್ಯಗಳಿಗೆ ಟ್ಯಾಬ್ಲೆಟ್ ಪಿ.ಸಿಯನ್ನು ಬಳಸಿಕೊಳ್ಳುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ ಮತ್ತು ಈ ಪ್ರಮಾಣವನ್ನು ಮೀರಿ ಟ್ಯಾಬ್ಲೆಟ್ ಪಿ.ಸಿಗಳನ್ನು ದುರುಪಯೋಗಪಡಿಸಿಕೊಂಡಿರುವುದು ಸಾಬೀತಾದಲ್ಲಿ, ನನ್ನ ಕೃತ್ಯಗಳಿಗೆ ನಾನೇ ಪೂರ್ಣ ಹೊಣೆಯಾಗಿದ್ದು, ಕಾನೂನಿನ್ವಯ ವಿಧಿಸಲಾಗುವ ಶಿಕ್ಷೆಗೆ ಒಳಗಾಗುವ ಮತ್ತು ಟ್ಯಾಬ್ಲೆಟ್ ಪಿ.ಸಿಯನ್ನು ಜಪ್ತಿಗೊಳಿಸುವ ಷರತ್ತಿಗೆ ಬದ್ಧನಾಗಿರುತ್ತೇನೆ ಹಾಗೂ ಅಂತಹ ಸಂದರ್ಭದಲ್ಲಿ ಟ್ಯಾಬ್ಲೆಟ್ ಪಿ.ಸಿಯನ್ನು ಹಿಂತಿರುಗಿಸಲು ಅಥವಾ ಟ್ಯಾಬ್ಲೆಟ್ ಪಿ.ಸಿಯ ನಿಗದಿತ ದರದಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಲು ಬದ್ಧನಾಗಿರುತ್ತೇನೆ.

ವಿದ್ಯಾರ್ಥಿಯ ಸಹಿ.

**Government of Karnataka**

**Department of Collegiate Education**

**STUDENT INFORMATION FOR ISSUE OF FREE TABLET PC FOR STUDENTS ADMITTED FOR FIRST YEAR DEGREE FOR THE ACADEMIC YEAR 2020-21**

Passport size Photo

# Receipt

| | | |
|---|---|---|
| 1 | Name of the College: | |
| 2 | Name of the Student | |
| 3 | University Registration Number | |
| 4 | Application ID of Student on the Online Admission Portal | |
| 5 | Aadhar Number | |
| 6 | Mobile Number | |

I Mr/Miss ____________________________________________

have received the Tablet PC bearing Serial number ______________________

on Date ___________________ in working condition.

Date: Signature of the Student

**Office use only**

| | | |
|---|---|---|
| 1 | Tablet PC Serial Number | |
| 2 | Date of issue of Tablet PC | |
| 3 | Issued by (Name and Signature of the Staff) | |